**ದಿನಾಂಕಃ 18-12-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವೆರದ ಮುಖ್ಯ ವಿಚಾರಣೆಗೆ ಮೆಲ್ಮನವಿದಾರರ ಪರ ಶ್ರೀ ಎ.ಜಿ.ಪಿ. ವಕೀಲರಿಂದಃ**

ಒ.ಎಸ್.ನಂ.71/2008 ತೀರ್ಪಿನ ದೃಡಿಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರ ಡೀಕ್ರಿ ದೃಡಿಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸರ್ಕಾರದ ಆದೇಶದ ಪತ್ರ ನಿಪಿ-3 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಪುರಸ್ಕರಿಸಿ ಮೇಲ್ಮನವಿ ಸಲ್ಲಿಸಲು ಆಗಿಲ್ಲ. ಕಾಲ ವಿಳಂಬವನ್ನು ಮನ್ನಿಸಲು ಆದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ವಕೀಲಲರಿಂದಃ**

ನನಗೆ ಈ ಪ್ರಕರಣದಲ್ಲಿ ನ್ನನ ಹಿಂದಿನ ದಾವಾ ನಡುವಳಿಕೆಯ ಬಗ್ಗೆ ದಾಖಲಾತಿಗಳ ಆಧಾರದ ಮೇಲೆ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ಮೇಲೆ ತಿಳಿಸಿದ ದಾವಾ ತೀರ್ಪು ಆದ ನಂತರ ಸರ್ಕಾರದ ಕಾನೂನು ಇಲಾಖೆಗೆ ಅಭಿಪ್ರಾಯಕ್ಕೆ ಕಳುಹಿಸಿ ಕೊಡಲಾಯಿತು. ನಾನು -ಆ ರೀತಿ ಸುಳ್ಳು ಹೇಳುತ್ತಿದ್ದು ಡೈರೆಕ್ಟರ್ ಆಫ್ ಪ್ರಾಸ್ಯೂಕೇಷನಗೆ ಕಳುಹಿಸ ಕೊಡಲಾಗಿದೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಈ ಇಲಾಖೆಯಲ್ಲಿ ಅನುಭವ ಕಾನೂನು ಅಧಿಕಾರಿಗಳು ಕಾಯದೇಯ ಜ್ಞಾನವುಳ್ಳವರು ಮತ್ತು ನ್ಯಾಯಾಂಗ ಅಧಿಕಾರಿಗಳು ಇರುತ್ತಾರೆ ಅಂದರೆ ಸರಿ. ಅವರಿಗೆ ಸಂಪೂರ್ಣ ಸ್ಟಿಬ್ಬಂದಿ ಮತ್ತು ಸಂಪನ್ಮೂಲಗಳನ್ನು ಪೂರೈಸಿರುತ್ತಾರೆ ಅಂದರೆ ಸರಿ. ಇಡೀ ರಾಜ್ಯದ ಪ್ರಕರಣಗಳು ಇರುವ ಕಾರಣ ತಡವಾಗಿರಬಹುದು ಆದರೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಅಲ್ಲಿ ಬೇರೆ ಬೇರೆ ಅಧಿಕಾರಿಗಳ ಮುಂದೆ ಪರಿಶೀಲನೆಗೆ ಹೋಗಿದ್ದು ಯೋಗ್ಯವಾಗಿದೆಯೆಂದು ಹಂತ ಹಂತವಾಗಿ ಹೋಗಿದ್ದು ಯಾವ ಅಧಿಕಾರಿಗಳ ಮುಂದೆ ಅಲ್ಲಿ ಯಾವ ಕಾರಣಕ್ಕಾಗಿ ತಡವಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ಸುಮಾರು 896 ದಿವಸ ತಡವಾಗಿದೆ. 903 ದಿವಸ ತಡವಾಗಿದೆ ಎಂದರೆ ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ದಾಖಲೆಗಳ ಪ್ರಕಾರ 896 ದಿವಸಗಳಾಗಿವೆ. ಕಡತುಗಳನ್ನು ಪರಿಶೀಲಿಸಿ ಆದ ಮೇಲೆ ನಾನು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ನನ್ನ ಪ್ರಮಾಣ ಪತ್ರದಲ್ಲಿ ತಡವಾದ ಬಗ್ಗೆ ಕಾರಣಗಳನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ. ಬುದ್ಧ್ಯಾಪೂರ್ವಕವಾಗಿ ಮೇಲ್ಮನವಿ ಸಲ್ಲಿಸಿದಲ್ಲಿ ಯಾವುದೇ ಪ್ರಯೋಜವಾಗುವುದಿಲ್ಲವೆಂದು ತಡವಾಗಿದೆಯೆಂದರೆ ಸರಿಯಲ್ಲ. ಮೇಲೆ ಹೇಳಿದಂತಹ ಅಧಿಕಾರಿಗಳ ಮುಂದೆ ಕಡತಗಳ ಪರಿಶೀಲನೆಗೆ ಒಳಗಾದ ಆ ಬಗ್ಗೆ ಕೂಡಲೇ ಗೊತ್ತಾಗುತ್ತದೆ ಅಂದರೆ ಸರಿ. ಈ ರೀತಿ ಅಬನ್ನಾರ್ಮಲ್ ತಡ ಆಗಿರುವ ಬಗ್ಗೆ ಸಕಾರಣಗಳನ್ನು ಮೇಲ್ಮನವಿಯನ್ನು ಸಲ್ಲಿಸಲಾಗಿಲ್ಲ ಅಂದರೆ ಸರಿಯಲ್ಲ. ಸರ್ಕಾರದ ಅಧಿಕಾರಿಗಳಿಗೆ ಈ

ಪ್ರಕರಣದಲ್ಲಿ ಅಪೀಲು ಮಾಡಿದ ಪಕ್ಷದಲ್ಲಿ ಯಾವುದೇ ಜಯ ಸೀಗುವುದಿಲ್ಲ ಎಂಬ ಕಾರಣಗೆ 903 ದಿವಸಗಳು ತಡವಾಗಿದೆಯೆಂದರೆ ಸರಿಯಲ್ಲ. ನನಗೆ ಈ ಪ್ರಕರಣಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ ಅಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ,
(ಸರವಣನ್ ಎಸ್)
3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.